

# ಮುಗಿಲೆಲ್ಲ ಕಪ್ಪಾಗಿ...

'ತಗಂಡೀನೆಪ್ಪ. ನಿನಗ ಪುಣ್ಯ ಬರಲಿ ತಂದೆ. ನನ್ನವು ಆಡು ಸತ್ತು ಅನಾಥೆ ಆಗೀನೆಪ್ಪ ನಾನು. ದೊಡ್ಡೋರಿಗೆ ಹೇಳಿ ರೊಕ್ಕನ್ನ ಕೊಡುಸಪ್ಪ. ನಿನ್ ಹೆಸರ್ಹೇಳಿ ಆಡು ಕೊಣಕಂಡು ಮತ್ತೆ ಬದುಕ್ತೀನಿ' ಎಂದು ಕೈಮುಗಿದುಕೊಂಡು ನಿಂತಳು. ಒಂದೇ ಅಳತಿ ಸಾಗಿದ್ದ ತನ್ನ ಕೆಲಸಕ್ಕೆ ಹೀಗೆ ಸಡನ್ನಾಗಿ ಒಂದು ಅನೂಹ್ಯವಾದ ಆದರೆ ಪ್ರಾಮಾಣಿಕವೆಂಬಂತೆ ತೋರುವ ಸಂಗತಿ ಎದುರಾಗಿ ಅಡಚಣೆಯಾಗಿದ್ದು ಶಿವಶರಣನನ್ನು ಗೊಂದಲಕ್ಕೀಡು ಮಾಡಿತು. ಉಳಿದ ಎರಡು ಸ್ಟಾಲ್‌ಗಳ ಕಡೆ ನೋಡಿದ. ರಣಜಿತ್, ಅಬ್ದುಲ್ಲ ತಮ್ಮ ತಮ್ಮ ಕೆಲಸಗಳಲ್ಲಿ ಮುಳುಗಿಹೋಗಿದ್ದರು. 'ಆಯ್ತುಂಗೆ ಎಮ್ಮ. ನೋಡಮು, ಏನನ್ನ ಒಂದು ಮಾಡಮು ತಗ. ಈಗ ನೀನು ಮನಿಗಿ ಹೋಗು. ಇದೆಲ್ಲ ಆದ್ಮ್ಯಾಲೆ ನನ್ನ ಬಂದು ಭೆಟ್ಟ್ಯಾಗು. ನಡಿ' ಎಂದು ಅನುನಯದ ದನಿಯಲ್ಲಿ ಆದೇಶ ಬೆರೆಸಿ ಹೇಳಿದ. ಆಮೇಲೆ ಎಲ್ಲ ಹಂಚಿಕೆ ಮುಗಿದ ಮೇಲೆ ಸಿಗರೇಟು ಸೇದಲೆಂದು ಹಳ್ಳದ ಕಡೆ ಹೋಗಿದ್ದಾಗ ವಾಲೆಕಾರನನ್ನು ಕೇಳಿ ಅವಳ ಬಗ್ಗೆ ತಿಳಿದುಕೊಂಡ. ವಾಲೇಕಾರನ ಪ್ರಕಾರ ಹುಸೇನ್‌ಬಿಯದು ಒಂದು ಗೋಳಿನ ಕಥೆ. ಒಂಟಿ ವಿಧವೆ ಹುಸೇನ್‌ಬಿ ಅಲ್ಲಿ ಇಲ್ಲಿ ಕೆಲಸ ಮಾಡಿ, ಪೈಸಾ ಪೈಸಾ ಕೂಡಿಸಿ, ಅಷ್ಟಿಷ್ಟು ಸಾಲ ಮಾಡಿ ಒಂದು ಆಡು ಕೊಂಡು ಒಂದಕ್ಕೆರಡು ಎರಡಕ್ಕೆ